# ಕಾವ್ಯ ಜೂಟಾಟ 1



## ಆರಿಫ್ ರಾಜಾ

ಕಲೆ: ಮದನ್ ಸಿ.ಪಿ.

ಕವಿಗಳು ಕೈ ಬದಲಿಸಿಕೊಂಡು ರೂಪಕವನ್ನು ಕಟ್ಟುವ 'ಕಾವ್ಯ ಜೂಟಾಟ'ದ ಪ್ರಯೋಗ 2010ರಲ್ಲಿ, **'ರೂಪ ರೂಪಗಳ ದಾಟಿ – ಕೃತಿಯಿಂದ ಆಕೃತಿಗೆ'** ಶೀರ್ಷಿಕೆಯಲ್ಲಿ 'ಮಯೂರ'ದಲ್ಲಿ ನಡೆದಿತ್ತು. ಹನ್ನೆರಡು ವರ್ಷಗಳ ನಂತರ ಆ ಪ್ರಯೋಗದ ಮರುಕಳಿಕೆ 'ಮಯೂರ'ದಲ್ಲಿಯೇ ನಡೆಯುತ್ತಿದೆ. ಸಮಕಾಲೀನ ಕವಿಗಳಲ್ಲಿ ಮುಖ್ಯರಾದ ಆರಿಫ್ ರಾಜಾ ಅವರ ಮೂಲಕ ಆರಂಭಗೊಳ್ಳುತ್ತಿರುವ ಈ ಕಾವ್ಯಯಾನ, ಮುಂದಿನ ಕೆಲವು ತಿಂಗಳುಗಳ ಕಾಲ ಮುಂದುವರೆಯಲಿದೆ; ಕಾವ್ಯದ ಜೊತೆಗೆ ಸಮಕಾಲೀನ ತವಕತಲ್ಲಣಗಳಿಗೂ ನುಡಿಯಾಗಿ ಕನ್ನಡಿಯಾಗಿ ಪರಿಣಮಿಸಲಿದೆ.

# MISSING

**ನೋಟ** 1

ರಾಯಚೂರಿನಿಂದ ಹೈದ್ರಾಬಾದ್‌ಗೆ ಹೋಗುವ ಬಸ್ಸಿನ ಬೆನ್ನಿಗೆ

'ಕಾಣೆಯಾಗಿದ್ದಾರೆ'<br>
ಹೆಸರು: ಹನುಮಂತ<br>
ವೃತ್ತಿ: ವಿದ್ಯಾರ್ಥಿ<br>
ವಯಸ್ಸು: 22<br>
ಕಲರ್: ಕಪ್ಪು ಬಣ್ಣ, ಸಾಧಾರಣ ಮೈಕಟ್ಟು<br>
ವಿಳಾಸ: ಬಂಬೈ ಕಂಪನಿ ಹತ್ತಿರದ ಸ್ಲಮ್, ರಾಯಚೂರು

ಬಹುಜನ ವಿದ್ಯಾರ್ಥಿ ಸಂಘಟನೆಗಳೊಂದಿಗೆ<br>
ಗುರುತಿಸಿಕೊಂಡಿದ್ದರು

ಕೊನೆಯ ಸಲ ಕಂಡದ್ದು<br>
ಜಿಲ್ಲಾಧಿಕಾರಿಗಳ ಕಚೇರಿ ಎದುರು<br>
ಕೆಂಪು ಬಾವುಟ ಹಿಡಿದು<br>
ಕೈ ಎತ್ತೆತ್ತಿ<br>
ಘೋಷಣೆ ಕೂಗುತ್ತಿರುವ ಭಂಗಿಯಲಿ

ಹಾಗೆಂದು ಸಹಪಾಠಿಗಳು ಹೇಳುತ್ತಾರೆ<br>
ಪಾರ್ಟಿ ಆಫೀಸ್ ನಂಬರ್: 08532–224466